# Short Story: ಜೀವದಾನ

**By Poornima Malagimani**

**Illustration: Namadev Kagadagar**



*Abstract: ನಿತ್ರಾಣನಾಗಿ ಮೂಲೆಯಲ್ಲಿ ಬಿದ್ದಿದ್ದವನಿಗೆ ಅಪ್ಪನಂತಹ ಮುಖ ಲಕ್ಷಣವಿದ್ದ ಫೋಟೋದಲ್ಲಿನ ಚಿಕ್ಕಪ್ಪನ ಮುಖ ಕಣ್ಣ ಮುಂದೆ ಸುಳಿಯತೊಡಗಿತು. ಎಂದೂ ಯಾವ ಭಾವಗಳೂ ಮೂಡದ ಅಮ್ಮನ ಮುಖ ಧುತ್ತೆಂದು ಕಣ್ಮುಂದೆ ನಿಂತು ಅಳುವುದು, ನಗುವುದು, ರಮಿಸುವುದು, ಮುನಿಸಿಕೊಂಡು ರಚ್ಚೆ ಹಿಡಿಯುವುದು ಮಾಡತೊಡಗಿತ್ತು. ಶೌಚಾಲಯ ತೊಳೆಯುತ್ತಿದ್ದ ಅಜ್ಜಿಯೊಂದು ಕಾಫಿ ತಂದುಕೊಟ್ಟು 'ಎದ್ದು ನೆಟ್ಟುಗ್ ಮನಿಗ್ ಹೋಗು. ಇಲ್ಲಾಂದ್ರೆ ಪೊಲೀಸ್ ಗೆ ಇಡ್ ಕೊಡ್ತೀನಿ, ಮನೆ ಬಿಟ್ಟು ಓಡಿ ಬಂದೋರಿಗೂ ರಿಮ್ಯಾಂಡ್ ಹೋಮೇ ಗತಿ ಗೊತ್ತ?' ಎಂದು ಹೆದರಿಸಿತು. ಮನೆಗೆ ಹೋಗುವುದು ಸಾಧ್ಯವೇ ಇರಲಿಲ್ಲ. ಅಪ್ಪ ಹೇಳಿದ ಹೋಟೆಲ್ಲಿಗೆ ಹೋಗಿ ಮುಸುರೆ ಪಾತ್ರೆ ತಿಕ್ಕುವುದು, ಟೇಬಲ್ ಒರೆಸುವುದು, ಬಾಗಿಲು ತೊಳೆದು, ಬೋರ್ಡ್ ಇಡುವುದರಿಂದ ಹಿಡಿದು ಎಲ್ಲಾ ಮಾಡತೊಡಗಿದೆ. ಇದಾದ ಒಂದೇ ವಾರಕ್ಕೆ ಅಪ್ಪ ಹುಡುಕಿಕೊಂಡು ಬಂದರು. ನನಗೆ ಅವರ ಮುಖ ನೋಡಲು ಇಷ್ಟವಿರಲಿಲ್ಲ. ಇದುವರೆಗೂ ಒಗಟಾಗಿದ್ದ ಅಮ್ಮ ಒಮ್ಮೆ ವಿಕ್ಟಿಮ್ ಆಗಿ ಕಂಡರೆ ಮತ್ತೊಮ್ಮೆ ಕೊಲೆಗಡುಕಿಯಾಗಿ ಕಾಣತೊಡಗಿದಳು. ಅಪ್ಪನನ್ನ ಹಿಂಡಿ ಹಿಪ್ಪೆ ಮಾಡಿದವಳು ಜೀವನವನ್ನೇ ತೇಯ್ದ ತಪಸ್ವಿನಿಯಾಗಿ ಕಂಡಳು.*

ಅಮ್ಮ ನಿಜವಾಗಿಯೂ ಹುಚ್ಚಿ ಅಲ್ಲ ಎಂದು ಅಪ್ಪ ಮಾತ್ರ ನಂಬಿದ್ದರು. ಆಕೆಯ ಮೂವತ್ತು ವರ್ಷದ ಏಕಮಾತ್ರ ಪುತ್ರನಾಗಿ ನನಗೆ ನನ್ನದೇ ಆದ ಅನುಮಾನಗಳಿದ್ದುವು. ಬೆಂಗಳೂರಿನ ದೊಡ್ಡ ಆಸ್ಪತ್ರೆಯೊಂದರಲ್ಲಿ ಹೃದಯದ ಶಸ್ತ್ರ ಚಿಕಿತ್ಸೆಗಾಗಿ ಬಂದಿದ್ದ ಅಪ್ಪ ಬೆಡ್ ಮೇಲೆ ಮಲಗಿದ್ದರೆ ಅಮ್ಮ ಚಿಕ್ಕ ಬೆಂಚಿನ ಮೇಲೆ ಗೋಡೆಗೊರಗಿ ಕುಳಿತು ಅಪ್ಪನನ್ನೇ ನೋಡುತ್ತಿದ್ದಳು. ಇವರಿಬ್ಬರನ್ನೂ ಮತ್ತೆ ಇದೇ ರೀತಿ ನೋಡಿ ನನಗೆ ತಲೆ ಕೆಟ್ಟಿತು. ಸರಸರನೆ ಹೊರಗೆ ಬಂದು ರಸ್ತೆ ಬದಿಯ ಟೀ ಅಂಗಡಿಯಲ್ಲಿ ಸಿಗರೇಟ್ ಕೊಂಡು ಹೊತ್ತಿಸಿ, ಸ್ಟ್ರಾಂಗ್ ಟೀ ಮಾಡಿಕೊಡಲು ಹೇಳಿದೆ.

ಶಿವಮೊಗ್ಗದಿಂದ ಇಪ್ಪತ್ತು ಕಿಲೋಮೀಟರ್ ದೂರದಲ್ಲಿ ಹಸಿರು ಭತ್ತದ ಗದ್ದೆಗಳನ್ನು ರತ್ನಗಂಬಳಿಯಂತೆ ಹೊದ್ದು ಭುಸು ಭುಸು ಬೆವರುತಿದ್ದ ಸಾಸಿವೆಹಳ್ಳಿಯಲ್ಲಿದ್ದ ನಮ್ಮ ದೊಡ್ಡ ಮನೆಯಲ್ಲಿ ನನಗೆ ಬುದ್ಧಿ ಬಂದಾಗಿನಿಂದ ನೋಡಿರುವಂತೆ ಅಪ್ಪ ಒಂದು ಮಂಚದ ಮೇಲೆ ಮಲಗುತ್ತಿದ್ದರೆ ಅಮ್ಮ ಅದರ ಎದುರಿಗೇ ಇದ್ದ ಇನ್ನೊಂದು ಮಂಚದ ಮೇಲೆ ಇಡೀ ರಾತ್ರಿ ಕೂತು ಅಪ್ಪನನ್ನೇ ನೋಡುತ್ತಿರುತ್ತಿದ್ದಳು. ಅವೆರಡೂ ಮಂಚಗಳು ಕಪ್ಪಗೆ ಮಿರಿ ಮಿರಿ ಮಿಂಚುವ ತೇಗದಿಂದ ಒಂದೇ ವಿನ್ಯಾಸದಲ್ಲಿ ಒಂದೇ ಅಳತೆಯಲ್ಲಿ ಮಾಡಿಸಿದ ಮಂಚಗಳಾಗಿದ್ದುವು. ಸುಮಾರು ಏಳಡಿ ಉದ್ದ, ಮೂರುವರೆ ಅಡಿ ಅಗಲದ ಆ ಮಂಚಗಳ ನಾಲ್ಕೂ ಮೂಲೆಗಳಿಗೆ ಮಷೀನ್ ಕಟಿಂಗ್ ಮಾಡಿಸಿ ತಂದ ಸುಂದರ ಕೆತ್ತನೆಯ ಕಂಭಗಳಿದ್ದುವು.  ಅದರ ಮೇಲೆ ಸೊಳ್ಳೆ ಪರದೆ ಹಾಕಿಕೊಳ್ಳಲು ಅನುಕೂಲವಾಗುವಂತೆ ಅದೇ ಅಳತೆಯ ಫ್ರೇಮ್ ಇತ್ತು. ತೇವಾಂಶ ಹೆಚ್ಚಿರುತ್ತಿದ್ದ ನಮ್ಮ ಊರಿನಲ್ಲಿ ಯಾವಾಗಲೂ ಸೊಳ್ಳೆಗಳಿರುತ್ತಿದ್ದರೂ ಒಂದೂ ದಿನವೂ ಅಮ್ಮ ಸೊಳ್ಳೆ ಪರದೆ ಕಟ್ಟಿದ್ದು ನೆನಪಿಲ್ಲ. ಅವುಗಳ ಮೇಲೆ ಯಾವಾಗಲೂ ಅಮ್ಮನ ಹಳೆಯ ಸೀರೆಗಳು ಮತ್ತು ಅಪ್ಪನ ಪಂಚೆ ಟವೆಲ್ ತೂಗು ಹಾಕಿರುತ್ತಿದ್ದುವು. ಬಟ್ಟೆಗಳಿಗಾಗಿಯೇ ಗೋಡೆಗೆ ಬಡಿದ ಮರದ ಎರಡು ಕೈಗಳ ಮೇಲೆ ಒಂದು ಕೋಲಿರಿಸಲಾಗಿತ್ತು. ಆದರೆ ಅದು ಯಾವಾಗಲೂ ಖಾಲಿ ಇರುತಿತ್ತು. ಬಣ್ಣ ಕಳೆದುಕೊಂಡ ಒಂದಷ್ಟು ಪ್ಲಾಸ್ಟಿಕ್ ಹ್ಯಾಂಗರ್ ಗಳು ಜೀವನದಲ್ಲಿ ಉದ್ದೇಶವನ್ನೂ ಕಳೆದುಕೊಂಡು ಜೋಲು ಮುಖ ಮಾಡಿಕೊಂಡು ಅದಕ್ಕೆ ತಗುಲಿ ಕೊಂಡಿದ್ದುವು.

ನಾನು ಹುಟ್ಟುವ ಮೊದಲು ಪಕ್ಕ ಪಕ್ಕದಲ್ಲೇ ಜೋಡಿಸಿಟ್ಟ ಮಂಚಗಳನ್ನು ದೇವಸ್ಥಾನದ ಕಾಂಪೌಂಡ್ ಮುಂದೆ ಅತ್ತೊಂದು ಇತ್ತೊಂದು ಬೀಳುವಂತೆ ಕಾಲಿನಿಂದಲೇ ಬೀಸಿ ಒಗೆದ ಜೋಡು ಚಪ್ಪಲಿಗಳಂತೆ ವಿಚಿತ್ರವಾಗಿ ಇರಿಸಿದ್ದು ಅಮ್ಮನೇ ಅಂತೆ. ಆ ಇಡೀ ಕೋಣೆಯೇ ಏನೋ ಒಂದು ವಿಚಿತ್ರವಾದ ಆಕಾರ ಪಡೆದುಕೊಂಡಿತ್ತು. ಅಪ್ಪನ ಮಂಚದ ಪಕ್ಕದ ಪುಟ್ಟ ಮೇಜು, ನೀರಿನ ಗಿಂಡಿ, ಅಪ್ಪ ಎಂದೂ ಓದಲಾಗದ ಪುಸ್ತಕಗಳು, ಚೌಕಾಕಾರದ ಎರಡಡಿ ಕಟಾಂಜನ, ಅಪ್ಪನ ಕಪಾಟು, ಒಂದಡಿ ಎತ್ತರದ ಮರದ ಮೇಜಿನ ಮೇಲಿರಿಸಿದ ಹೊಂಬಣ್ಣದ ಚಕ್ರ ಮತ್ತು ಹಿಡಿ ಕೈಗಳಿದ್ದ ಟ್ರಜಿರಿ, ಚಾಮುಂಡೇಶ್ವರಿ, ವೀರಭದ್ರೇಶ್ವರ ದೇವರುಗಳ ಕ್ಯಾಲೆಂಡರ್, ಫೋಟೋ ಫ್ರೇಮ್ ಕೆಳಗೆ ಸಣ್ಣ ಹಲಗೆಯಿಟ್ಟು  ಕೊಂಚ ಬಾಗಿದಂತೆ ಇರಿಸಿದ ಅಪ್ಪನನ್ನೇ ಹೋಲುತಿದ್ದ ವ್ಯಕ್ತಿಯ ಫೋಟೋದೊಳಗಿನ ಮಿಟುಕಿಸದ ಕಣ್ಣುಗಳು, ಯಾವುದೂ ಅಲ್ಲಿಗೆ ಸಂಬಂಧ ಪಟ್ಟ ವಸ್ತುಗಳೆನಿಸುತ್ತಿರಲಿಲ್ಲ. ಅಮ್ಮನಿಗೆ ಹೆದರಿ ಅಲ್ಲಾಡದಂತೆ ಎಲ್ಲವೂ ಸ್ತಬ್ಧವಾದಂತೆ ಅನಿಸುತ್ತಿದ್ದುವು. ತುಸು ಹೆಚ್ಚೇ ಎನಿಸುವ ಉದ್ದುದ್ದ ಬ್ಲೇಡ್ ಗಳಿದ್ದ ಫ್ಯಾನ್ ಮಾತ್ರ ನಿಂತಿರಲು ಹೆದರಿ ಯಾವಾಗಲೂ ತಿರುಗುತ್ತಿರುತ್ತಿತ್ತು.

ಅದು ನಿಂತಿದ್ದೇ ನೋಡಿಲ್ಲ ನಾನು. ಇಡೀ ಊರಲ್ಲಿ ಕರೆಂಟ್ ಹೋದಾಗಲೂ ಕೂಡ!

ಅದರ ಸ್ವಿಚ್ ಎಲ್ಲಿದೆ ಅಂತಲೇ ಗೊತ್ತಿಲ್ಲ!

ಹುಟ್ಟಿದಾಗಿನಿಂದ ಮಂಚದ ಮೂಲೆಯ ಕಂಭಕ್ಕೆ ಒರಗಿ ಕುಳಿತ ಅಮ್ಮನ ಪಕ್ಕದಲ್ಲೇ ನಾನು ಮಲಗಿರುತ್ತಿದ್ದೆ. ನಾನು ಮತ್ತು ಅಪ್ಪ ನಿದ್ದೆ ಹೋದಮೇಲೆ ಅವಳು ಮಲಗುತ್ತಾಳೆ ಅಥವಾ ಕುಳಿತೇ ತೂಕಡಿಸುತ್ತಾಳೆ ಎಂದು ಬಹಳ ಗಾಢವಾಗಿ ನಂಬಿದ್ದ ನಾನು ಎಷ್ಟೋ ಬಾರಿ ರಾತ್ರಿಯ ಯಾವುದೋ ವೇಳೆಯಲ್ಲಿ ಎಚ್ಚರವಾಗಿ ನೋಡಿದರೆ ಅಮ್ಮ ಹಾಗೇ ಕುಳಿತಿರುತ್ತಿದ್ದಳು. ನನ್ನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದರೂ ಅವಳ ಕಣ್ಣುಗಳು ಏನನ್ನೂ ಮಾತನಾಡುತ್ತಿರಲಿಲ್ಲ. ರಾತ್ರಿಯ ಕತ್ತಲಲ್ಲಿ ಕೆಂಡದಂತೆ ನಿಗಿನಿಗಿ ಹೊಳೆಯುತ್ತಿದ್ದ ಅವಳ ಭಾವಹೀನ ಕಣ್ಣುಗಳು ಕೆಟ್ಟ ಭಯ ಹುಟ್ಟಿಸುತ್ತಿದ್ದುವು. ಬೇಕೆಂದೇ ನಾನು ನೀರು ಕೇಳಿದರೆ ಅಥವಾ ಪುಟ್ಟ ಹುಡುಗನಾಗಿ ಹೊರಗೆ ವಂದ ಮಾಡಲು ಹೋಗಲು ಹೆದರಿಕೆ ಜೊತೆಗೆ ಬಾ ಎಂದರೆ ಕೀಲಿ ಕೊಟ್ಟ ಗೊಂಬೆಯಂತೆ ಎದ್ದು ಬರುತ್ತಿದ್ದಳು. ಯಾವುದೇ ಕಾರಣಕ್ಕೂ ಮಾತನಾಡುತ್ತಿರಲಿಲ್ಲ. ನಾನು ಹೆದರಿ ಅಳಲು ಶುರು ಮಾಡಿದಾಗ ಅಪ್ಪ ನನ್ನ ಬಳಿ ಬಾ ಮಲಗು ಎಂದು ಕರೆಯುತ್ತಿದ್ದರು. ಆದರೆ ಅಮ್ಮನ ಕೆಂಗಣ್ಣುಗಳನ್ನು ನೋಡಿ ಅಪ್ಪ ಮತ್ತು ನಾನು ಇಬ್ಬರೂ ಹೆದರಿ ಮತ್ತೆ ನಮ್ಮ ನಮ್ಮ ಜಾಗಗಳಲ್ಲಿಯೇ ಮಲಗಿ ಬಿಡುತ್ತಿದ್ದೆವು. ಸದಾ ತಪ್ಪಿತಸ್ತನಂತೆ ಇರುತಿದ್ದ ಅಪ್ಪ ಮಾತ್ರ ಅಮ್ಮನನ್ನು ಎದುರಿಸಲಾಗದೆ ಗೋಡೆ ಕಡೆಗೆ ತಿರುಗಿ ಮಲಗುತ್ತಿದ್ದರು. ಅವರು ಗೊರಕೆ ಹೊಡೆದದ್ದು ಎಂದೂ ಕೇಳದಿದ್ದರೂ ಉಸಿರಾಡಿದಷ್ಟು ಲಯದಲ್ಲೇ ಭಾರವಾದ ನಿಟ್ಟುಸಿರು ಬಿಡುತ್ತಿದ್ದರು. ಕೊಟ್ಟಿಗೆಯಲ್ಲಿ ಎತ್ತುಗಳು ಉಸಿರಾಡಿದಂತೆ. ನಾನು ಸುಮಾರು ಹನ್ನೆರಡು ವರ್ಷದವನಾದಾಗಲೂ ಇದೇ ರೀತಿ ಅಮ್ಮನ ಮಂಚದಲ್ಲೇ ಮಲಗುವ ನಾಟಕ ನಡೆಯುತ್ತಿದ್ದಾಗ, ನಿದ್ದೆ ಬಾರದೆ, ಬಂದರೂ ಮಲಗಲಾಗದೆ ಒದ್ದಾಡುತ್ತಿದ್ದ ನನ್ನ ನೋಡಿ ಮರುಗಿದ ಅಪ್ಪ ಅಮ್ಮನಲ್ಲಿ ಬೇಡಿದರು.

"ಮಗು ಅದು, ಅದನ್ನಾದರೂ ಬದುಕಿಕೊಳ್ಳಲು ಬಿಟ್ಟು ಬಿಡು."

ಅಪ್ಪನ ಕಣ್ಣೀರು, ನಿಂತಲ್ಲೇ ಮಾತನಾಡದೆ ಅದೇ ನಿರ್ಲಿಪ್ತತೆಯಿಂದ ನೋಡುತ್ತಿದ್ದ ಅಮ್ಮನ ಕೆಂಪು ರವಿಕೆಯ ಕಂಕುಳು, ಕುತ್ತಿಗೆ, ಬೆನ್ನು ತೋಯಿಸಿ ಕಪ್ಪಗಾಗಿಸಿದ ಬೆವರಿಗಿಂತ ಹೆಚ್ಚೇನೂ ಇರಲಿಲ್ಲ. ಅದೇ ರಾತ್ರಿ ಅಟ್ಟದ ಮೇಲೆ ನನ್ನ ಹಾಸಿಗೆ ದಿಂಬುಗಳು ಅಡಿಯಿಟ್ಟವು. ತಮ್ಮ ಮಡಿಕೆಯಂತಹ ಹೊಟ್ಟೆ ಹೊತ್ತು ಕೊಂಡೇ ಕುಕ್ಕರುಗಾಲಿನಲ್ಲಿ ಕೂತು ಅಪ್ಪ ಅಟ್ಟದ ಧೂಳು ಹೊಡೆದರು. ದಟ್ಟ ಧೂಳಿನ ಮೇಲೆ ಬೀಳುತ್ತಿದ್ದ ಹನಿಗಳು ಬೆವರೋ ಕಣ್ಣೀರೋ ಗೊತ್ತಾಗುತ್ತಿರಲಿಲ್ಲ. ತೆಂಗಿನ ಗಿಟುಕುಗಳು, ಅಡಿಕೆ ಚೀಲಗಳು, ಅವಲಕ್ಕಿ, ಮಂಡಕ್ಕಿ ಚೀಲಗಳ ಮಧ್ಯೆ,ಕಮಟು ವಾಸನೆ ಬರುತಿದ್ದ ಹಿತ್ತಾಳೆ ಹಂಡೆ, ಗಂಗಾಳ,ತಾಮ್ರದ ಗಿಂಡಿಗಳ ಮಧ್ಯೆ, ಜಿರಳೆ, ಸೊಳ್ಳೆ, ಮೂಗಿಲಿಗಳ ಮೂದಲಿಕೆಗಳ ಮಧ್ಯೆ ಮೊದಲ ಬಾರಿ ಕಣ್ತುಂಬ ನಿದ್ದೆ ಮಾಡಿದೆ.

ಅಷ್ಟರಲ್ಲಿ ಒಬ್ಬ ಮುದುಕ ಅವನ ಮಗನಂತಿದ್ದವನ ಜೊತೆ ಬಂದು ಟೀ ಅಂಗಡಿ ಮುಂದೆ ನಿಂತು ದೊಡ್ಡದಾಗಿ ಕೆಮ್ಮುವುದು ಕೇಳಿಸಿತು. ಮುದುಕ ಯಾವುದೋ ಅಡಿಕೆ ಚೀಟಿ ಕೇಳಿತು. ನಾನು ನನ್ನ ಟೀ ಕಪ್ ತೆಗೆದುಕೊಂಡು ಆ ಮುದುಕನನ್ನೇ ಕೆಲ ಕ್ಷಣ ಗಮನಿಸಿದೆ. ನನ್ನ ಅಜ್ಜ ಇದ್ದಿದ್ದರೆ, ಅವನಿಗೂ ಹೀಗೊಂದು ಚಟ ಇದ್ದಿದ್ದರೆ ನಾನೇ ಜೊತೆಯಲ್ಲಿ ಕರೆದುಕೊಂಡು ಬರುತ್ತಿದ್ದೆನೇನೋ? ಅಮ್ಮನನ್ನು ಖಂಡಿತ ಹೆದರಿಸಿಕೊಳ್ಳುತ್ತಿದ್ದ ನನ್ನ ಅಜ್ಜ ಅನಿಸುತ್ತೆ. ನನ್ನಂತೆ ಅಥವಾ ಅಪ್ಪನಂತೆ ಹೇಡಿಯಾಗಿರುತ್ತಿರಲಿಲ್ಲ. ಒಮ್ಮೆಲೇ ನನಗೆ ಅಮ್ಮನ ಮೇಲಿರುವುದು ಭಯವಲ್ಲ ಎಂದು ಅರಿವಿಗೆ ಬಂದರೂ ಅವಳನ್ನು ಅರ್ಥವೇ ಮಾಡಿಕೊಳ್ಳಲಾಗದ, ಮಾತನಾಡಿಸಲಾಗದ, ಪ್ರೀತಿ -ಮಮತೆ ಬಯಸದ, ನೀಡದ, ಬೇಡದ,

ಆಕಾಶದಂತೆ ತೆರೆದುಕೊಳ್ಳುವ ಅವಳಿಲ್ಲದ ಪ್ರಪಂಚದಲ್ಲಿ ಆಡಲಾಗದ, ಅವಳ ಮಡಿಲಲ್ಲಿ ಮುದುಡಿ ಕೂರಲಾಗದ, ಬಂಧಿಯಾಗಿಲ್ಲದಿದ್ದರೂ ಓಡಿಹೋಗುವ ಮನಸ್ಸೇ ಇಲ್ಲದ ನನ್ನ ಅವಳ ಸಂಬಂಧ ಎಂತದು ಎಂದು ನನಗೇ ಗೊಂದಲವಾಗುತಿತ್ತು.

ಹಳ್ಳಿಗಳಲ್ಲಿ ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಕೂಡು ಕುಟುಂಬಗಳೇ. ನಾನೂ ಅಮ್ಮನನ್ನು ಒಮ್ಮೆ ನಮ್ಮ ಮನೆಯಲ್ಲಿ ಅಜ್ಜ, ಅಜ್ಜಿ, ಅತ್ತೆ, ಚಿಕ್ಕಪ್ಪ, ಚಿಕ್ಕಮ್ಮ ಅವರ ಮಕ್ಕಳು ಎಲ್ಲಾ ಯಾಕಿಲ್ಲ ಎಂದು ಕೇಳಿದಾಗ ಉತ್ತರ ಸಿಗಲಿಲ್ಲ. ನಾನೂ ಮತ್ತೆಂದೂ ಕೇಳಲು ಧೈರ್ಯ ಮಾಡಲಿಲ್ಲ. ನನ್ನೆಲ್ಲಾ ಪ್ರಶ್ನೆಗಳಿಗೆ ಅಪ್ಪ ನೆಲ ನೋಡಿದರೆ ಅಮ್ಮ ಆಕಾಶ ನೋಡುತ್ತಿದ್ದಳು. ಅವಳ ಮುಖದಲ್ಲಿ ಸಿಟ್ಟು- ಸೆಡವು, ಅಸಹನೆ, ಹತಾಶೆ ಯಾವುದೂ ಇರುತ್ತಿರಲಿಲ್ಲ. ಅದೊಂದು ವಿಚಿತ್ರವಾದ ತಣ್ಣನೆಯ ಯಾತನಾಮಯ ನಿರ್ಲಿಪ್ತತೆ. ಶಾಂತತೆಯ ಅಶಾಂತ ರೂಪ. ಯಾರನ್ನು ನೋಡಿ ನಗುವುದ ಕಲಿತೆ ಎಂದು ನನಗೆ ಈಗಲೂ ನೆನಪಿಲ್ಲ. ಮೂರು ನಾಲ್ಕು ವರ್ಷದವನಾದಾಗ ನಾನಾಗಿಯೇ ಶಾಲೆಗೆ ಹೋಗಿ ಕೂತಿರದಿದ್ದರೆ ಮಾತೇ ಆಡದ ಮೂರೇ ಜನರ ಮನೆಯಲ್ಲಿ ನನಗೆ ಮಾತುಗಳೇ ಕೇಳಲು ಸಿಗುತ್ತಿರಲಿಲ್ಲವೇನೋ. ಮಾತು ಕಲಿಸಬೇಕಾದವರು, ಮಗುವಿನ ಮುದ್ದು ಮಾತುಗಳನ್ನು ಕೇಳಬೇಕಾದವರು ಮೌನವಾಗಿದ್ದು ಬಿಟ್ಟಿದ್ದರು.

ಒಂದಿಪ್ಪತ್ತು ಹುಡುಗರಿದ್ದ ಹಳ್ಳಿಯ ಸ್ಕೂಲಿಗೆ ಅಪ್ಪನೇ ಹೆಡ್ ಮಾಸ್ಟರ್!

ಆದರೆ ಎಂದೂ ಕೈ ಹಿಡಿದುಕೊಂಡು ಜೊತೆಯಲ್ಲಿ ಕರೆದುಕೊಂಡು ಹೋಗಲಿಲ್ಲ. ಬೇರೆಯವರಂತೆ ವ್ಯಾನ್ ಮಾಡಿ ಶಿವಮೊಗ್ಗದಲ್ಲಿನ ಕಾನ್ವೆಂಟ್ಗಳಿಗೆ ನನ್ನ ಸೇರಿಸಲಿಲ್ಲ. ನಮ್ಮ ಮನೆಯ ಆರ್ಥಿಕ ಪರಿಸ್ಥಿತಿ ಹೇಗಿತ್ತು ಎನ್ನುವುದು ನನಗೆ ಈಗಲೂ ಹೇಳಲು ಬರುವುದಿಲ್ಲ. ನಾನು ಏನು ಕೇಳಿದರೂ ಕೊಡಿಸುತ್ತಿದ್ದರೇನೋ, ಅಥವಾ ನನಗೆ ಬೇಕಾಗಿದ್ದು ತರುವಂತದ್ದಲ್ಲ ಅನಿಸುತ್ತೆ. ಮನೆಯಲ್ಲಿ ಪ್ರೀತಿಗೆ, ಮಾತಿಗೆ ಬರವಿತ್ತು. ಮೂವರೂ ಸ್ವತಂತ್ರರು; ಆದರೆ ಮೂವರೂ ಒಡೆತನ ಬಯಸುವ ಬಿಕರಿಗಿಟ್ಟ ನಡೆದಾಡುವ ಗೊಂಬೆಗಳಾಗಿದ್ದೆವು. ನನ್ನ ಬಗ್ಗೆ ಅಪ್ಪನಿಗಿದ್ದುದು ಅಪಾರ ಪ್ರೀತಿ ಮತ್ತು ಪಾಪ ಪ್ರಜ್ಞೆ ಅನಿಸುತಿತ್ತು. ಇವರಿಂದ ತಪ್ಪಿಸಿಕೊಳ್ಳಲು ನಾನು ಶಾಲೆ ಮುಗಿದರೂ ಹೊರಗೇ ಇರತೊಡಗಿದೆ. ನನ್ನ ಬಾಲ್ಯ ಹೇಗಿತ್ತು, ಹೇಗೆ ಕಳೆಯಿತು ಎಂದು ಎಷ್ಟು ಯೋಚಿಸಿದರೂ ಏನೂ ನೆನಪಾಗುವುದೇ ಇಲ್ಲ. ಅಪ್ಪನ ಮಂಚದ ಹಿಂದಿನ ಬಿಳೀ ಗೋಡೆಯಂತೆ ಕೆಲವು ತೂತುಗಳ ಬಿಟ್ಟರೆ ಬೇರೇನೂ ಇರಲಿಲ್ಲ. ಅಲ್ಲಿ ಏನೂ ಮೂಡುವುದು ಶಕ್ಯವಿರಲಿಲ್ಲ. ಊರ ಅಗಸೆ ಬಾಗಿಲಿಗೆ ಇದಿರಾಗಿದ್ದ ವೀರಭದ್ರೇಶ್ವರ ದೇವಸ್ಥಾನದ ಕಾಂಪೌಂಡ್ ಮೇಲೆ ಕಲ್ಲಿನ ಸಂಧಿಗಳಲ್ಲಿ ಕೂಡ ಅಲ್ಲಲ್ಲಿ ಹುಲ್ಲು, ಹೂವಿನ ಗಿಡ ಹುಟ್ಟಿರುತ್ತಿದ್ದುವು. ಆದರೆ ಇಲ್ಲಿ ಭಾವನೆಗಳ ಹುಟ್ಟಿಗೂ ಬರ; ನೆನಪುಗಳ ಸಾವಿಗೂ. ಅದೇನು ನಡೆದಿತ್ತೋ, ಅದೇನು ಮನದಲ್ಲೇ ಇಟ್ಟುಕೊಂಡು ದ್ವೇಷ ಸಾಧಿಸುತ್ತಿದ್ದರೋ ಇಬ್ಬರೂ ಗೊತ್ತಾಗುತ್ತಲೇ ಇರಲಿಲ್ಲ.

ಆಟವಾಡಿ ಉಳಿದ ಹುಡುಗರು ಮನೆಗೆ ಹೋದರೆ ನಾನು ಗುಡಿಯ ಹಿಂದೆ ದೊಡ್ಡವರು ಇಸ್ಪೀಟ್ ಆಡುವುದನ್ನು ನೋಡಲು ಹೋಗುತ್ತಿದ್ದೆ. ಗೆಲುವು, ಸೋಲು, ಖುಷಿ, ನೋವು, ಆಟದ ಮಜಾ, ಉತ್ಕಟತೆ ಎಲ್ಲ ಅನುಭವಿಸಿ ಮಕ್ಕಳಾಗಿ ಮೈ ಮರೆಯುತ್ತಿದ್ದ ವಯಸ್ಕರನ್ನು ನೋಡುವುದು ನನಗೆ ಖುಷಿಯಾಗುತ್ತಿತ್ತು.

"ಏಯ್ ಯಾಕೋ ಹಂಗ್ ಮುಷ್ಣಿ ನೋಡ್ಕೆಂತ ಕುಂತಿಯ?" ಎಂದು ಎಲ್ಲರೂ ಗದರುತ್ತಿದ್ದರು. ಮತ್ತೆ ಆಟದಲ್ಲಿ

ಮುಳುಗುತ್ತಿದ್ದರು. ಒಂದೇ ಮುಖ ಎಷ್ಟೊಂದು ಭಾವನೆಗಳನ್ನು ವ್ಯಕ್ತ ಪಡಿಸಬಲ್ಲುದು ಎಂದು ಸೋಜಿಗವೆನಿಸುತ್ತಿತ್ತು. ಆ ಸಮಯದಲ್ಲೇ ನೋಟ್ಬುಕ್ ಗಳ ಹಿಂದೆ ಮನುಷ್ಯರ ರೇಖಾ ಚಿತ್ರಗಳನ್ನು ಬರೆಯತೊಡಗಿದೆ. ಮೊದಲಿಗೆ ನನ್ನಷ್ಟಕ್ಕೆ ಬರೆದುಕೊಳ್ಳುತ್ತಿದ್ದವನು ನಿಧಾನವಾಗಿ ಸ್ನೇಹಿತರಿಗೆ ತೋರಿಸಿದೆ. ನಮ್ಮ ಇಡೀ ಶಾಲೆಗೆ ಒಬ್ಬರೇ ಅಧ್ಯಾಪಕಿಯಾದ ಸುಮತಿ ಮೇಡಂ ಚಿತ್ರ ಬರೆದೆ. ಒಂದೊಂದೇ ಹುಡುಗಿಯರ ಚಿತ್ರ ಬರೆದೆ. ನನ್ನದು ಬರಿ ನನ್ನದು ಬರಿ ಎನ್ನುತ್ತಾ ಎಲ್ಲರೂ ಮುಗಿಬೀಳತೊಡಗಿದರು. ಪಾಠ ಕೇಳಿಸಿಕೊಳ್ಳದೆ ಚಿತ್ರ ಬರೆಯತೊಡಗಿದೆ. ಎಕ್ಸಾಮ್ ನಲ್ಲಿ ಗಿಡ, ಹೂವು, ಹೃದಯ, ಜಠರ ಬರೆಯಲು ಕೇಳಿದರೆ ಕೇಳಿದ್ದಕ್ಕಿಂತ ಹತ್ತರಷ್ಟು ಚಿತ್ರಗಳನ್ನು ಬರೆಯತೊಡಗಿದೆ. ಮೇಷ್ಟುಗಳಿಗೆ ಸುದ್ದಿ ಹೋಯಿತು. ಅವರೆಲ್ಲ ಕರೆದು ನೋಡಿದರು. ಅಚ್ಚರಿ ಎಂದರೆ ಯಾರೂ ಸಿಟ್ಟು ಮಾಡಿಕೊಳ್ಳಲಿಲ್ಲ. ಕೊನೆಗೆ ಸಿಟ್ಟು ಬರಿಸಲೆಂದೇ ಅಶ್ಲೀಲವಾಗಿ ಹುಡುಗಿಯರ ತುಟಿಗಳು, ಮೊಲೆಗಳು, ತೊಡೆಗಳು, ಎಲ್ಲಾ ಕಾಣುವಂತೆ ಬರೆಯತೊಡಗಿದೆ. ಆಗ ನಾನು ಹದಿನಾಲ್ಕು ವರ್ಷದವನಿರಬೇಕು.

ಕೆಲವು ಸ್ನೇಹಿತರು ದೂರವಾದರು. ಗುಡಿ ಹಿಂದೆ ಇಸ್ಪೀಟ್ ಆಡುತಿದ್ದ ಗಂಡಸರು ನನ್ನ ಕರೆದು ಕರೆದು ನನ್ನ ನೋಟಬುಕ್ ಕಸಿದು ಕೊಂಡು ನೋಡತೊಡಗಿದರು.

ಹಲ್ಲುಗಳು ಉದುರಿ, ಕೂದಲೂ ಉದುರಿ ಬೋಡನಾಗಿದ್ದ ಮಂಜಣ್ಣ, "ಅಬ್ಬಬ್ಬಾ ಏನು ಚೆಂದ ಬರುದ್ದಿಯಲೋ ನಿಮ್ ಅವ್ವನಾಡಾ! ಚಂದ್ರಲೇಖಾ ಚಿತ್ರ ಬರಿಯಲೇ." ಎಂದು ಕುಡಿದ ಮತ್ತಿನಲ್ಲಿ ಕುಳಿತಲ್ಲೇ ತೂರಾಡಿದ. ನನ್ನ ಸಿಟ್ಟು ನೆತ್ತಿಗೇರಿ ಹತ್ತಿರದಲ್ಲಿದ್ದ ಕಲ್ಲು ತೆಗೆದುಕೊಂಡು ಅವನ ತಲೆಗೆ ಒಡೆದು ಓಡಿ ಹೋದೆ. ಮಂಜಣ್ಣ, ನೋವಿನಿಂದ ಚೀರುತ್ತಲೇ, "ಹುಂ ಕಣಲೇ, ಬೇವಾರ್ಸಿ. ಅಪ್ಪನಿಗುಟ್ಟಿದ್ರೆ ಹಿಂಗ್ ಓಡ್ ಹೋಕಿದ್ಯ? ನಿಂತ್ಕಳಲೇ... " ಎಂದು ಬೈಯ್ಯುತ್ತಿದ್ದ.

ಆದರೂ ಅಪ್ಪನಿಗೆ ಯಾರೂ ದೂರು ಕೊಡಲಿಲ್ಲ. ಇದುವರೆಗೂ ಅಪ್ಪನಿಗೆ ಗೊತ್ತಿದೆಯೋ ಇಲ್ಲವೋ ಅನುಮಾನ.

ಅಂದು ರಾತ್ರಿಯೆಲ್ಲಾ ಪಂಚೆ ಬಿಚ್ಚಿ ಕೈಲಿ ಹಿಡಿದುಕೊಂಡು ಮಂಜಣ್ಣ ಅಮ್ಮನನ್ನು ಅಡ್ಡ ಹಾಕಿ ಕೆಟ್ಟದಾಗಿ ಮಾತನಾಡುತ್ತಿದ್ದಂತೆ ಕನಸು. ಒಂದು ವೇಳೆ ನಾನು ಅಪ್ಪನಿಗೆ ಹುಟ್ಟಿದವನಾಗಿರದಿದ್ರೆ? ಅಮ್ಮ ಅಪ್ಪನ ವೈಮನಸ್ಯಕ್ಕೆ ಇದೇ ಕಾರಣವಿರಬಹುದೇ? ಅವರು ಜೊತೆಯಾಗಿ ಎಂದೂ ಮಲಗುವುದಿಲ್ಲ. ಇದರ ಬಗ್ಗೆ ಯಾರಿಗೆ ಗೊತ್ತಿರಬಹುದು ಎಂದು ತಲೆ ಕೆಡಿಸಿಕೊಂಡೆ. ಏನೂ ಪ್ರಯೋಜನವಾಗಲಿಲ್ಲ. ಎರಡು ದಿನ ಅಟ್ಟದಿಂದ ಇಳಿದು ಬರಲೇ ಇಲ್ಲ.

ಅಮ್ಮ ಕರೆಯಲಿಲ್ಲ!

ಆಸ್ಪತ್ರೆಯ ರಿಸೆಪ್ಶನಿಸ್ಟ್ ಕರೆ ಮಾಡಿದಳು. "ಡಾಕ್ಟರ್ ಕರೀತದರೆ, ಗಡಗಡ ಬರ್ರಿ."

ಸಿಗರೇಟ್ ವಾಸನೆ ಬರದಂತೆ ಬಾಯಿ ತೊಳೆದುಕೊಂಡು ಡಾಕ್ಟರ್ ಬಳಿ ಹೋದೆ. 'ನಿಮ್ಮಂತ ಮಕ್ಕಳು ಯಾಕಿರಬೇಕು' ಎನ್ನುವಂತೆ ನೋಡುತ್ತಿದ್ದ ಅವರನ್ನು ನಾನೂ, 'ಡೆಡ್ ಬಾಡಿ ಅದು; ಯಾಕಿಂಗ್ ಕಟಿ ಕಟಿ ಮಾಡ್ತಿರಲೇ ಕತ್ತಿಗುಟ್ಟಿದರಾ' ಎಂದು ಮನದಲ್ಲೇ ಬೈದು ಕೊಂಡೆ.

"ನಿಮ್ಮ ಅಪ್ಪನಿಗೆ ಹಾರ್ಟ್ ಟ್ರಾನ್ಸ್ಪ್ಲಾಂಟ್ ಮಾಡಿಸಬೇಕು ಅಂತ ಹೇಳಿದ್ನಲ್ಲ, ಯಾರಾದರೂ ಡೋನರ್

ಸಿಕ್ಕಿದರಾ?" ಎಂದು ಕೇಳಿ ಅಪ್ಪನ ಫೈಲ್ ಮೇಲೆ ಮತ್ತೆ ಕಣ್ಣಾಡಿಸಿ "ಹೆಚ್ಚಿಗೆ ಟೈಮ್ ಇಲ್ಲ ನಮ್ ಹತ್ರ." ಎಂದು ಬೇಸರದಿಂದ ನೋಡಿದರು. ಅಮ್ಮ ಮೊನ್ನೆ ಬಾತ್ರೂಮ್ ಒಳಗಿದ್ದಾಗ ಅಪ್ಪ ಹತ್ತಿರ ಕರೆದು, "ಬೇಗ ಏನಾರ ವ್ಯವಸ್ಥೆ ಮಾಡಿಬಿಡು ಮಗ್ನೇ, ಇನ್ನೂ ಈ ನರಕದಾಗ್ ಇರಾಕಾಗಲ್ ನೋಡಪಾ. ಗೋಣ್ ಇಚುಕ್ ಬುಡತ್ಲಾಗೆ."

ಏನನ್ನೂ ಬೇಡದ ಅಪ್ಪ ಮಗನಿಂದ ಸಾವು ಬಯಸಿದ್ರು!

ಬಯಕೆಗಳು ಯಾವಾಗಲೂ ವಿಚಿತ್ರ ಅಂತಲೇ ಅನ್ನಿಸುತ್ತವೆ, ವಯಸ್ಸಿಗೆ ಸಹಜವಾದುವೇ ಆದ್ರೂ. ನಾನು ಸುಮ್ಮನೇ ನಡೆದು ಬಿಟ್ಟಿದ್ದೆ.

ಚಂದ್ರಲೇಖಾ ಊರಿನ ಗೌಡ್ರು ಇಟ್ಟುಕೊಂಡ ಸೂಳೆ ಅಂತ ಕೆಲವರು ಮಾತನಾಡುವುದನ್ನು ಕೇಳಿದ್ದೆನಾದರೂ ಆಕೆಯನ್ನ ನೋಡಿದ ನೆನಪಿರಲಿಲ್ಲ. ಅವಳು ಎಲ್ಲಿರುತ್ತಾಳೆ, ಯಾರೊಂದಿಗೆ ಇರುತ್ತಾಳೆ, ಗೌಡ್ರು ನಿಜವಾಗ್ಲೂ ಅವಳ ಮನೆಗೆ ಬರ್ತಾರಾ ಎಲ್ಲಾ ವಿಚಾರಿಸುತ್ತಾ ಹದಿನಾಲ್ಕು ವರ್ಷದ ನಾನು ಅವಳ ಮನೆಯ ಮುಂದೆ ಇದ್ದ ಮಂಡಕ್ಕಿ, ಮೆಣಸಿನಕಾಯಿ, ಟೀ ಮಾರುತ್ತಿದ್ದ ಹನುಮಕ್ಕನ ತೆಂಗಿನ ಗರಿ ಹೋಟೆಲ್ ಒಳಗೆ ಕೂತು ಕಾಯುತ್ತಿದ್ದೆ. ಗುಡಿ ಹಿಂದೆ ಗಂಡಸರ ಇಸ್ಪೀಟ್ ಆಟ ನೋಡಲು ಹೋಗುವುದು ಬಿಟ್ಟಿದ್ದೆ. ಚಿತ್ರ ಬರೆಯುವುದು ಬಿಟ್ಟಿದ್ದೆ. ಶಾಲೆಗೆ ಹೋಗುವುದು ಬಿಟ್ಟಿದ್ದೆ. ಕತ್ತಲಾದರೂ ನನ್ನ ಹುಡುಕಿಕೊಂಡು ಎಂದೂ ಯಾರೂ ಬರುತ್ತಿರಲಿಲ್ಲ. ಊಟಕ್ಕೆ ಮಾತ್ರ ನಾನಿರಲಿ ಬಿಡಲಿ ಯಾವಾಗಲೂ ಅಪ್ಪನ ತಟ್ಟೆಯೊಂದಿಗೆ ಒಂದು ತಟ್ಟೆ ಇರಿಸಲಾಗುತ್ತಿತ್ತು. ಅಪ್ಪನನ್ನೇ ನುಂಗುವಂತೆ ನೋಡುತ್ತಿದ್ದ ಅಮ್ಮನ ಎದುರಿಗೆ ತುತ್ತು ನುಂಗಲಾರದೆ ಒದ್ದಾಡುತ್ತಿದ್ದ ಅಪ್ಪನನ್ನು ನೋಡುವುದು ನನಗೆ ಹಿಂಸೆಯಾಗುತಿತ್ತು. ಆದರೂ ಅಪ್ಪ ಊಟ ಮಾಡುತ್ತಿದ್ದರು. ಒಮ್ಮೆ ಅಪ್ಪ ಊಟ ಮುಗಿಸಿ ಎದ್ದ ಮೇಲೆ ಏನೋ ಅನುಮಾನದಿಂದ ಅವರ ತಟ್ಟೆಯಲ್ಲಿ ಉಳಿದಿದ್ದ ಸ್ವಲ್ಪ ಬೀಟ್ರೂಟ್ ಪಲ್ಯವನ್ನು ತಿಂದಾಗ ಸ್ವಲ್ಪವೂ ಉಪ್ಪು ಖಾರವಿಲ್ಲದೆ ಅದೇ ರೂಪದ ನನ್ನ ತಟ್ಟೆಯಲ್ಲಿದ್ದ ಪಲ್ಯಕ್ಕಿಂತ ಸಪ್ಪಗಿತ್ತು. ಅಂದಿನಿಂದ ಅಮ್ಮ ಊಟ ಬಡಿಸುವಾಗ ಗಮನವಿಟ್ಟು ನೋಡುತ್ತಿದ್ದೆ. ಅದೇ ಬಟ್ಟಲು, ಅದೇ ಸೌಟು. ಆದರೆ ರುಚಿ ಬೇರೆ. ಒಮ್ಮೆ ಅವಳ ಕಣ್ಣು ತಪ್ಪಿಸಿ ಅಡಿಗೆ ಮನೆಯಲ್ಲಿ ಸಾರು ಪಲ್ಯಗಳನ್ನು ಕದ್ದು ತಿಂದು ನೋಡಿದಾಗ ರುಚಿಯಾಗಿಯೇ ಇದ್ದುವು!

ಅಪ್ಪನ ಬಗ್ಗೆ ಮತ್ತಷ್ಟು ಕನಿಕರವಾಯಿತು; ಅಮ್ಮನ ಬಗ್ಗೆ ದಿಗಿಲಾಯಿತು.

ಹನುಮಕ್ಕನ ಹೋಟೆಲ್ ಒಗ್ಗರಣೆ ಮಂಡಕ್ಕಿ ರುಚಿ ಇರುತಿತ್ತು. ಅವಳು ಎಷ್ಟೋ ಸಾರಿ ದುಡ್ಡು ಕೇಳುತ್ತಿರಲಿಲ್ಲ. ಒಮ್ಮೊಮ್ಮೆ ನನಗೆ ಬೇಸರವಾಗುತ್ತಿತ್ತು. ನನ್ನ ಬಗ್ಗೆ ಯಾಕೆ ಊರವರಿಗೂ ಸಿಟ್ಟು ಬರುವುದಿಲ್ಲ? ಯಾಕೆ ಎಲ್ಲಾ ಕನಿಕರದಿಂದಲೇ ನೋಡ್ತಾರೆ ಎಂದು ಯೋಚಿಸಿದಷ್ಟೂ ತಲೆ ಕೆಟ್ಟು ಹನ್ನೆರಡಾಣೆ ಆಗುತಿತ್ತು. ತಿಂಗಳುಗಟ್ಟಲೆ ಅಲೆದರೂ ಚಂದ್ರಲೇಖಾ ಮನೆಯಿಂದ ಹೊರಗೆ ಬರುವುದು ಕಾಣಲಿಲ್ಲ, ಗೌಡ್ರು ಒಳಗೆ ಹೋಗುವುದೂ ಕಾಣಲಿಲ್ಲ.

ಅಪ್ಪ ನನ್ನಂತೆ ಸ್ಕೂಲಿನಲ್ಲಿ ಯಾರನ್ನೂ ಮಾತನಾಡಿಸುತ್ತಿರಲಿಲ್ಲ. ಯಾರೊಂದಿಗೂ ಸ್ನೇಹ ಸಲಿಗೆ ಇರಲಿಲ್ಲ. ಮನೆ ಬಿಟ್ಟರೆ ಸ್ಕೂಲ್, ಸ್ಕೂಲ್ ಬಿಟ್ಟರೆ ಮನೆ. ಯೂನಿವರ್ಸಲ್ ಕ್ಯಾಮೆರಾದಂತೆ ಅಮ್ಮನ ಕಣ್ಣುಗಳು ಯಾವಾಗಲೂ ತಮ್ಮನ್ನು ಹಿಂಬಾಲಿಸುತ್ತಿವೆಯೇನೋ ಎನ್ನುವಂತಿರುತ್ತಿದ್ದರು. ಸಮಯಕ್ಕೆ ಸರಿಯಾಗಿ ಪಾಠ ಮುಗಿಸಿ ಮನೆ ಸೇರಿ ಹಿತ್ತಿಲಿನಲ್ಲಿ ತರಕಾರಿ ಗಿಡಗಳನ್ನು ನೆಡುವುದು, ನೀರು ಬಿಡುವುದು, ಪಾತಿ ತೋಡುವುದು ಮಾಡುತ್ತಿದ್ದರು. ಆದರೆ ಆ ಗಿಡಗಳಲ್ಲಿ

ಒಂದೂ ತರಕಾರಿ ಬೆಳೆಯುತ್ತಿರಲಿಲ್ಲ. ಹೂವು ಕಚ್ಚಿದ ಮೇಲೆ ಬಾಡಿ ಹೋಗುತ್ತಿದ್ದುವು. ಆದರೂ ಅಪ್ಪ ಹಿತ್ತಲಿನಲ್ಲಿರುವುದು ಬಿಡಲಿಲ್ಲ. ಒಮ್ಮೆ ಸ್ಕೂಲ್ ಮುಗಿಸಿ ಮನೆಗೆ ಮರಳುತ್ತಿದ್ದ ಅಪ್ಪನನ್ನು ನಾನು ಕೈ ಹಿಡಿದು ಅಡ್ಡಗಟ್ಟಿ ಕೇಳಿದ್ದೆ.

"ಅಪ್ಪಯ್ಯ, ಅಮ್ಮಂಗೇನಾಗ್ಯತೆ? ನಮ್ಮನೆ ಬೇರೆಯವರ ಮನೆಗುಳ್ ಇದ್ದಂಗ್ ಯಾಕಿಲ್ಲ? ಯಾಕ್ ನಿಂದ್ ಊಟ ಸಪ್ಪಗಿರ್ತತೇ? ಅಮ್ಮ ಹುಚ್ಚಿ ಅಂತೆ ಹೌದಾ?" ಅಂತೆಲ್ಲಾ ನೆನಪಾದಷ್ಟು ಪ್ರಶ್ನೆಗಳನ್ನು ಒಂದೇ ಉಸಿರಿಗೆ ಕೇಳಿಬಿಟ್ಟೆ.

ಬೆದರಿದ ಅಪ್ಪ ಅತ್ತಿತ್ತ ನೋಡಿ, "ಐದು ಘಂಟೆಗೆ ಗುರುರೇಣುಕಾ ಬಸ್ ಬರ್ತತೆ. ನೀನು ಹತ್ತಿಕೊಂಡು ಶಿವಮೊಗ್ಗಕೆ ಹೋಗಿ ಬಸ್ ಸ್ಟ್ಯಾಂಡಿನತ್ರ ಮಂಜುನಾಥ ಹೋಟೆಲಿನಗೆ ಕೆಲ್ಸಕ್ಕೆ ಸೇರಿಕ್ಯಂಡ್ ಬುಡು. ನೀನು ಊರು ಬಿಟ್ಟು ಓಡಿ ಹೋಗು ಮಗ್ನೇ." ಎನ್ನುತ್ತಾ ಕೈಗೆ ನೂರು ರೂಪಾಯಿ ಇಟ್ಟರು. ನಾನು ಏನು ಮಾಡಲೂ ತೋಚದೆ ಬೆಪ್ಪನಂತೆ ನೋಡುತ್ತಿದ್ದಾಗ ನನ್ನ ಅಂಗಿ ಜೇಬಿನೊಳಗೆ ಇಟ್ಟು ಸರಸರನೆ ಮನೆಗೆ ನಡೆದು ಹೋಗೇ ಬಿಟ್ಟರು.

ನನಗೂ ಅವರು ಹೇಳಿದಂತೆ ಮಾಡುವುದೇ ಸರಿ ಅನ್ನಿಸಿತು. ಹೇಗಿದ್ದರೂ ಊರೇ ಬಿಟ್ಟು ಹೋಗುತ್ತಿರುವಾಗ ಒಮ್ಮೆ ಚಂದ್ರಲೇಖಾಳನ್ನು ಭೇಟಿಯಾಗಿ ಹೋಗಬೇಕೆನಿಸಿ ಅವಳ ಮನೆಗೆ ಹೋಗೇ ಬಿಟ್ಟೆ. ಸುಮಾರು ಮೂವತ್ತು - ಮೂವತ್ತೈದು ವರ್ಷದವಳಿರಬಹುದು ಚಂದ್ರಲೇಖಾ ಎನ್ನುವ ಸುಂದರಿ. ತೆಂಗಿನ ಕಾಯಿ ಗಾತ್ರದ ಮೊಲೆಗಳು, ತುಸು ದಪ್ಪ ಅನಿಸುವ ಮೈ ಕಟ್ಟು, ಬೆನ್ನ ಮೇಲೆ ಹರವಿದ್ದ ಹಸಿ ಗುಂಗುರು ಕೂದಲು, ತುಸು ಕೆಂಚು ಅನಿಸುವ ಕಣ್ಣುಗಳು, ಸೇಫ್ಟಿ ಪಿನ್ ಚುಚ್ಚಿದ್ದ ಒಂದು ಕೆಂಪು ಗುಲಾಬಿ ಬಲಗಡೆ ಕುತ್ತಿಗೆಯ ಕೂದಲ ಆತುಕೊಂಡು ಕುಳಿತಿತ್ತು. ನಾನು ನೋಟುಬುಕ್ ಹಿಂದೆ ಬರೆಯುತ್ತಿದ್ದ ಹುಡುಗಿಯರ ಚಿತ್ರಗಳಂತೆಯೇ ಇದ್ದಳು. ಅವಳನ್ನು ಬೆತ್ತಲಾಗಿ ನೋಡಿಲ್ಲದಿದ್ದರೂ ಅದು ಹೇಗೆ ಬರೆದೆ ಎಂದು ನನಗೇ ಆಶ್ಚರ್ಯವಾಗುವಂತಿದ್ದಳು.

ಮಂಜಣ್ಣ ಅವಳ ಹೆಸರು ಏಕೆ ಹೇಳಿದ, ನನ್ನ ಅಪ್ಪ ಯಾರೆಂದು ಅವಳಿಗೆ ಗೊತ್ತಿರಬಹುದು, ನನ್ನ ಮನೆಯ ವೃತ್ತಾಂತ ಏನು ಎತ್ತ ಎಂದೆಲ್ಲಾ ತಿಳಿದುಕೊಳ್ಳಲು ಹೋಗಿದ್ದ ನಾನು, "ಚಂದ್ರವ್ವ ನಿನ್ನ ಚಿತ್ರ ಬರೀಲಾ?" ಎಂದು ಕೇಳಿ ಅವಳ ಅಂದವನ್ನೇ ನೋಡುತ್ತಾ ನಿಂತಿದ್ದೆ. ಅವಳು ಪಕ ಪಕನೇ ನಕ್ಕು ಬಿಟ್ಟಳು.

ಆ ನಗು ನನ್ನ ಜೀವಮಾನವೆಲ್ಲಾ ಜೊತೆಯಲ್ಲಿ ಉಳಿದು ಬಿಟ್ಟ ನಗು. ಜೋಕ್ ಹೇಳದೆಯೂ ನಗಬಹುದು ಅಂತ ಅಂದೇ ನನಗೆ ತಿಳಿದದ್ದು. ಜೋಕ್ ಕೇಳದೆಯೂ ನಗುವ ಶಕ್ತಿ ಇರುವ ಚಂದ್ರಲೇಖಾ ನನ್ನ ಅಮ್ಮನಾಗುವಂತಿದ್ದರೆ ಎಂದು ಬಹಳ ಆಸೆ ಪಟ್ಟೆ. ಮೊದಲ ಬಾರಿಗೆ ಒಂದು ಹೆಣ್ಣಿನ ಆತ್ಮೀಯತೆಯ ಅರಿತ ನಾನು ಭಾವುಕನಾಗುತಿದ್ದೆ. ತಕ್ಷಣ ಸಾವರಿಸಿಕೊಂಡು, "ಚಂದ್ರವ್ವ ನಮ್ಮಮ್ಮಂಗೆ ಇಂಗ್ ನಗಾಕ್ ಹೇಳ್ಕೊಡ್ತಿಯಾ? ಇಂಗ್ ತಲೆ ಬಾಚಿಕೊಳೊಕ್ ಹೇಳ್ಕೊಡತೀಯಾ? ಅಕಿ ವಿಚಿತ್ರ ಅಮ್ಮ ಅಗ್ಯಾಳೆ. ಏನು ಮಾಡದೂ ಹೇಳ್ತೀಯಾ?" ನನ್ನ ತುಂಬಿದ ಕಣ್ಣುಗಳನ್ನು ನೋಡಿ ಅವಳು ಮತ್ತೆ ಜೋರಾಗಿ ನಕ್ಕಳು.

"ಸೂಳೆ ಮನೆಗ್ ಬಂದ್ ಅಳ್ತಿಯಲ್ಲೋ ದಡ್ಡ? ಇಲ್ಲಿ ಸ್ವರ್ಗ ಸಿಗ್ತತೆ, ಪ್ರೀತಿ ಗ್ರೀತಿ ಎಲ್ಲಾ ಸಿಗಲ್ ನೋಡಪಾ." ಅವಳು ನನ್ನನ್ನು ಒಳಗೆ ಕರೆಯದಿದ್ದರೂ ನಾನೇ ಬೆನ್ನು ಹತ್ತಿ ಹೋದೆ. ಒಳಗೆ ಒಂದು ಮುದುಕಿ ಇವಳ ಮೈಗೆ ಹಚ್ಚಲೋ ದೇವರಿಗೋ ದುಂಡನೆಯ ಕಲ್ಲಿನ ಮೇಲೆ ಗಂಧ ತೇಯುತ್ತಿದ್ದಳು. ನನ್ನ ನೋಡಿದ ಮುದುಕಿ, 'ಯಾರೋ ತಮ್ಮಾ, ಮೇಷ್ಟ್ರು

ಮಗ ಅಲೆನೋ?" ಎಂದಿತು. ನಾನು ಮುದುಕಿಯ ಮಾತಿನಿಂದ ಉದ್ವೇಗಕ್ಕೊಳಗಾದವನಂತೆ ಓಡಿ ಅವಳ ಪಕ್ಕ ಕುಳಿತು, "ಹೇಳಜ್ಜಿ, ನೀನಾರೇ ಹೇಳು. ಅಪ್ಪಂಗುಟ್ಟಿದವನಲ್ವಾ ನಾನು?" ಎಂದು ಅಂಗಲಾಚಿದೆ. ಅಜ್ಜಿಗೆ ನನ್ನ ಸ್ಥಿತಿ ನೋಡಿ ಕನಿಕರಕ್ಕಿಂತ ತಿರಸ್ಕಾರ ಹುಟ್ಟಿತು ಅನಿಸುತ್ತೆ. "ನಿಂಗ್ ನಿಜ ಹೇಳಿದ್ರೂ ಏನ್ ಲಾಭ ಐತೆ? ನಂಗೇನ್ ಸಿಕ್ತತೆ ಅದ್ರಿಂದ?" ಚೌಕಾಸಿ ಮಾಡತೊಡಗಿತು.

ನಾನು ನನ್ನ ಬ್ಯಾಗಿನಿಂದ ನೋಟಬುಕ್ ತೆಗೆದು, "ಇಲ್ನೋಡು ಹಿಂಗೇ ನಿನ್ ಚಿತ್ರ ಬರುದ್ ಕೊಡ್ತೀನಿ." ಎಂದೆ. ನನ್ನ ಚಿತ್ರಗಳನ್ನು ನೋಡಿದ ಅಜ್ಜಿಗೆ ಇನ್ನಷ್ಟು ಹೇಸಿಗೆಯಾಯ್ತು. "ಅಯ್ಯೋ ಹಾಳಾದೋನೆ, ಎಲ್ಲಿ ಹೋಗ್ತತೆ ಮತ್ತೆ ಅಪ್ಪನ್ ಕಚ್ಚೆ ಹರುಕ್ ಬುದ್ದಿನೇ ನಿಂಗೂ ಬಂದಿರದು." ಎನ್ನುತ್ತಾ ನೋಟಬುಕ್ ಎಸೆದಳು.

"ಅಜ್ಜಿ ನಮ್ಮಪ್ಪ ಅಂತನಲ್ಲ. ಊರಿಗ್ ಊರೇ ಮೇಷ್ಟ್ರು ಅಂತ ಬೆಲೆ ಕೊಡ್ತತೆ." ನಾನು ಚಂದ್ರವ್ವನ ಮುಂದೆ ಅವಮಾನದಿಂದ ಕುದಿಯುತ್ತಾ ನೋಟಬುಕ್ ಎತ್ತಿಕೊಂಡೆ.

"ನೀನು ಅವನಿಗ್ ಹುಟ್ಟಿದ್ರೆ ಇಂತ ಮನೆ ಬಾಗಿಲು ತುಳೀತಿದ್ದೆನಪಾ?" ಎಂದು ಮುಖ ಹಿಂಡಿಕೊಂಡಳು. ನಾನು ತಕ್ಷಣ ನನ್ನ ಜೇಬಿನಿಂದ ಅಪ್ಪ ಕೊಟ್ಟ ನೂರು ರೂಪಾಯಿ ತೆಗೆದು ಅವಳ ಮುಂದೆ ಹಿಡಿದು ಕೊಂಡು ಕೇಳಿದೆ, "ಈಗ ಬೊಗಳ್ತೀಯ ನಿಜ ಏನು ಅಂತ. ಏನಾರ ಸುಳ್ಳೇಳಿದೆ ಅಂದ್ರೆ ಅಜ್ಜಿ ಅಂತಾನೂ ನೋಡಲ್ಲ. ಮಂಜಣ್ಣನ ತಲೆ ಒಡೆದಂಗೆ ಒಡುದ್ ಬುಡ್ತಿನಿ ನೋಡು." ಎಂದೆ.

ಅಜ್ಜಿ ನನ್ನ ಕೈಯಿಂದ ನೋಟು ಕಿತ್ತುಕೊಂಡು, ಶುರು ಮಾಡಿತು. ನಾನು ನಿಂತಿದ್ದವನು ಅವಳ ಮುಂದೆ ಕುಕ್ಕರುಗಾಲಿನಲ್ಲಿ ಕುಳಿತೆ. ನನಗರಿವಿಲ್ಲದೇ ಎದೆಬಡಿತ ಹೆಚ್ಚಿತು. ಏನೋ ಅವ್ಯಕ್ತ ಭಯ ಕಾಡತೊಡಗಿತು. ಒಮ್ಮೆ ಇದೆಲ್ಲಾ ತಿಳಿದುಕೊಳ್ಳದಿರುವುದೇ ಲೇಸು ಎಂತಲೂ ಎನಿಸಿ ಓದಿ ಹೋಗಲೇ ಎಂದು ಬಾಗಿಲ ಕಡೆ ನೋಡಿದೆ.

"ನಿಮ್ಮವ್ವ ಹದಿನೈದ್ ಹದಿನಾರ್ ವರ್ಷದಕಿ ಇದ್ಲು ಈ ಊರಿಗ್ ಮದ್ವೆ ಆಗಿ ಬಂದಾಗ. ಅಪ್ಪ ಅವ್ವ ಇಲ್ದಂಗ್ ಬೆಳುದ್ರೂ ಅಂಗೆ ಕಡಕಂಡು ತಿನ್ನಂಗಿದ್ಲು."

ಅಜ್ಜಿಯ ಧ್ವನಿಗೆ ಅವಳತ್ತ ತಿರುಗಿ ಕಲ್ಲಾಗಿ ಕುಳಿತೆ.ಚಂದ್ರಲೇಖಾ ದೊಡ್ಡ ಬೆತ್ತದ ಖುರ್ಚಿ ಮೇಲೆ ಗುಲಾಬಿ ಕಾಲುಗಳನ್ನು ಅಲ್ಲಾಡಿಸುತ್ತಾ ಕುಳಿತಳು.

"ನಾಕೈದು ವರ್ಷ ಆದ್ರೂ ಮಕ್ಕಳಾಗಲಿಲ್ಲ. ನಿಮ್ಮಪ್ಪ ಮನೆಗ್ ಬರದ್ ಬಿಟ್ಟು ಗದ್ದೆಗೇ ಇರಾಕತ್ತಿದ್ದ. ಇಲ್ಲಿ ನಿಮ್ಮಜ್ಜ, ಅಜ್ಜಿ, ಚಿಕ್ಕಪ್ಪ ಎಲ್ಲಾರಿಗು ಕೂಳು ಬೇಸಿಕೇಂತ ನಿಮ್ಮವ್ವ ಇದ್ಲು. ಕಡ್ಲೆಕಾಳು ಇದ್ದಂಗೆ ಚೆಂದ ಮೂಗು, ಬಾಯಿ, ಬಣ್ಣ ನೋಡಿ ಅತ್ತಿಗೆಮ್ಮಾ ಅನ್ನದ್ ಮರ್ತು ನಿಮ್ ಚಿಕ್ಕಪ್ಪ ಅಕಿ ಮ್ಯಾಲ್ ಬಿದ್ದ. ಅತ್ತಿ ಮಾವರಿಗ್ ಹೇಳಿದ್ರೆ ಅವರು ನಂಬವೋಲ್ರು. ಗಂಡಗ ಹೇಳಿದ್ರೂ ನಂಬಲಿಲ್ಲ. ನೀನೇ ಇಲ್ಲದ್ ಕಲ್ಪಿಸಿ ಕೊಂಡಿದೀಯ ಅಂತ ಹಂಗಿಸಿದ್ರು. ಗದ್ದೆ ಕೆಲಸ ಮುಗಿದ್ ಕುಟ್ಟಲೆ ನಿನ್ ಗಂಡ ಬರ್ತಾನೆ ಬಿಡವ್ವಾ ಅಂದ್ರು. ದಿನಾ ಗಿಡುಗನ್ ಕೈಗ್ ಸಿಕ್ಕ ಒದ್ದಾಡಿದ್ಲು ನಿಮ್ಮವ್ವ."

ಕುಕ್ಕರುಗಾಲಿನಲ್ಲಿ ಕುಳಿತಿದ್ದ ನಾನು ಬ್ಯಾಲೆನ್ಸ್ ತಪ್ಪಿ ಹಿಂದಕ್ಕೆ ನೆಲಕ್ಕುರುಳಿದೆ. ಮತ್ತೆ ಸಾವರಿಸಿಕೊಂಡು

ಕುಳಿತವನ ಕಣ್ಣುಗಳು ಅಜ್ಜಿಯ ಮುಂದಿದ್ದ ದುಂಡನೆಯ ಕಲ್ಲಿನ ಮೇಲಿದ್ದುವು. ಕೈಗಳು ಗೊತ್ತಿಲ್ಲದೇ ಮುಷ್ಟಿಯಾಗಿದ್ದುವು. ನಾನೂ ಕೊಟ್ಟಿಗೆಯ ಎತ್ತುಗಳಂತೆ ಜೋರಾಗಿ ಉಸಿರಾಡಹತ್ತಿದೆ.

"ಎಲ್ಡ್ ತಿಂಗಳ್ ತುಂಬತ್ತಿಗೇ ಬೀಮನ್ಸಿ ಆದ್ಲು ನಿಮ್ಮವ್ವ. ಊರಾಗ್ ಯಾರಿಗೂ ಖಬರ್ ಕೊಡ್ಲಿಲ್ಲ ನಿಮ್ಮಜ್ಜಿ. ಯಾರನ್ನೂ ಮನೆ ಒಳಕ್ ಬಿಟ್ಕಮ್ತಿದ್ದಿಲ್ಲ. ವೋಸ್ರುನು ದೂರ ಮಾಡಿಕೆಂಡ್ರು. ಆವಾಗ ಮನಿಗ್ ಬಂದ ನೋಡು ನಿಮ್ಮಪ್ಪ. ನಿಮ್ಮವ್ವ ಕುಡುಗೋಲ್ ಹಿಡ್ಕಂಡು ಅವನ್ ಮ್ಯಾಲೆ ಸಿಡಿಲ್ನಂಗ್ ಎರಗಿದ್ಲು. ನನಿಗ್ ಈ ಕೂಸು ಬ್ಯಾಡ ಅಂತ ಹಠ ಮಾಡಿದ್ಲು. ಆಗ ನಿಜ ಹೊರಗ್ ಬಿತ್ತು ನೋಡಾ. ಅತ್ತೆ -ಮಾವ, ಮೈದುನ, ಗಂಡ ಎಲ್ಲಾ ಶಾಮೀಲಾಗಿದ್ರು ಈ ಕರ್ಮದಾಗೆ. ಹಿರೇ ಮಗನಿಗ್ ಮಕ್ಳು ಆಗಲ್ಲ ಅಂತ ಕಿರೇ ಮಗನ್ ಛೂ ಬಿಟ್ಟಿದ್ರು ನೋಡಪಾ. ಅಕಿಗ್ ಮೂರು ತಿಂಗ್ಳು ತುಂಬತ್ತಿಗೆ ಒಂದಿನ ಭತ್ತದ ರಾಶಿ ಕಾಯಕೆ ಗದ್ದೆಗೆ ಹೋದ್ ಅತ್ತೆ- ಮಾವ, ಮೈದುನ ಮೂವರೂ ಭತ್ತದ ರಾಶಿ ಜೊತೆಗೆ ಸುಟ್ಟು ಭೂದಿ ಆಗಿಬಿಟ್ರು ನೋಡಪಾ. ಹೆಂಗ್ ಬೆಂಕಿ ಬಿತ್ತು ಅಂತ ಯಾರಿಗೂ ಗೊತ್ತಿಲ್ಲ. ಈಸಾಕಂದ್ ವರ್ಷ ಆದ್ರೂ ಮತ್ಯಾರೂ ಆ ಗದ್ದೆಗ ಕಾಲ್ ಇಡ್ಲಿಲ್ ನೋಡಪಾ. ಕಾಡ್ ಆಗೋಗೆತಿ."

ಅಷ್ಟೂ ಹೊತ್ತೂ ಹಲ್ಲು ಕಚ್ಚಿಕೊಂಡು ಅವಮಾನದಿಂದ ಕೇಳುತಿದ್ದ ನಾನು ತಕ್ಷಣವೇ ಎದ್ದು ಸಿಟ್ಟಿನಿಂದ ಗಂಧದ ಕಲ್ಲನ್ನು ಎತ್ತಿಕೊಂಡು ಅಜ್ಜಿ ಕಾಲ ಮೇಲೆ ಜೋರಾಗಿ ಕುಕ್ಕಿ ನೆಲದ ಮೇಲೇ ಇದ್ದ ನನ್ನ ಹತ್ತರ ನೋಟನ್ನು ಎತ್ತಿಕೊಂಡು ಹೊರಗೆ ಓಡಿದೆ.

ನನ್ನೆದುರೇ ಬಸ್ ನಿಲ್ಲಿಸದೆ ಹೋಗುತಿತ್ತು. ನಾನು ಬಿಡದೇ ಬಸ್ ಬೆನ್ನು ಹತ್ತಿದೆ. ಹೊರಟೇ ಬಿಟ್ಟೆ!

ನನ್ನ ಹುಟ್ಟು ಇಷ್ಟೆಲ್ಲಾ ಜೀವಗಳನ್ನು, ಜೀವನಗಳನ್ನೂ ಬಲಿ ತೆಗೆದುಕೊಂಡಿತೇ!

ಯಾವ ಪುರುಷಾರ್ಥಕ್ಕಾಗಿ? ನಾನು ಸಾಧಿಸಿದ್ದಾದರೂ ಏನು?

ಅಪ್ಪ ಹೇಳಿದ ಹೋಟೆಲ್ಲಿಗೆ ಹೋಗದೆ ಬಸ್ ಸ್ಟ್ಯಾಂಡಿನ ಶೌಚಾಲಯದಲ್ಲೇ ಬಚ್ಚಿಟ್ಟುಕೊಂಡು ಎರಡು ದಿನ ಕಳೆದೆ. ಒಂದು ಘಳಿಗೆಯೂ ನಿದ್ರೆ ಬರಲಿಲ್ಲ. ಒಂದಗುಳೂ ಊಟ ಮಾಡಿರಲಿಲ್ಲ. ನಿತ್ರಾಣನಾಗಿ ಮೂಲೆಯಲ್ಲಿ ಬಿದ್ದಿದ್ದವನಿಗೆ ಅಪ್ಪನಂತಹ ಮುಖ ಲಕ್ಷಣವಿದ್ದ ಫೋಟೋದಲ್ಲಿನ ಚಿಕ್ಕಪ್ಪನ ಮುಖ ಕಣ್ಣ ಮುಂದೆ ಸುಳಿಯತೊಡಗಿತು. ಎಂದೂ ಯಾವ ಭಾವಗಳೂ ಮೂಡದ ಅಮ್ಮನ ಮುಖ ಧುತ್ತೆಂದು ಕಣ್ಮುಂದೆ ನಿಂತು ಅಳುವುದು, ನಗುವುದು, ರಮಿಸುವುದು, ಮುನಿಸಿಕೊಂಡು ರಚ್ಚೆ ಹಿಡಿಯುವುದು ಮಾಡತೊಡಗಿತ್ತು. ಶೌಚಾಲಯ ತೊಳೆಯುತ್ತಿದ್ದ ಅಜ್ಜಿಯೊಂದು ಕಾಫಿ ತಂದುಕೊಟ್ಟು 'ಎದ್ದು ನೆಟ್ಟಗ್ ಮನಿಗ್ ಹೋಗು. ಇಲ್ಲಾಂದ್ರೆ ಪೊಲೀಸ್ ಗೆ ಇಡ್ ಕೊಡ್ತೀನಿ, ಮನೆ ಬಿಟ್ಟು ಓಡಿ ಬಂದೋರಿಗೂ ರಿಮ್ಯಾಂಡ್ ಹೋಮೇ ಗತಿ ಗೊತ್ತ?' ಎಂದು ಹೆದರಿಸಿತು.

ಮನೆಗೆ ಹೋಗುವುದು ಸಾಧ್ಯವೇ ಇರಲಿಲ್ಲ. ಅಪ್ಪ ಹೇಳಿದ ಹೋಟೆಲ್ಲಿಗೆ ಹೋಗಿ ಮುಸುರೆ ಪಾತ್ರೆ ತಿಕ್ಕುವುದು, ಟೇಬಲ್ ಒರೆಸುವುದು, ಬಾಗಿಲು ತೊಳೆದು, ಬೋರ್ಡ್ ಇಡುವುದರಿಂದ ಹಿಡಿದು ಎಲ್ಲಾ ಮಾಡತೊಡಗಿದೆ.

ಇದಾದ ಒಂದೇ ವಾರಕ್ಕೆ ಅಪ್ಪ ಹುಡುಕಿಕೊಂಡು ಬಂದರು. ನನಗೆ ಅವರ ಮುಖ ನೋಡಲು ಇಷ್ಟವಿರಲಿಲ್ಲ.

ಇದುವರೆಗೂ ಒಗಟಾಗಿದ್ದ ಅಮ್ಮ ಒಮ್ಮೆ ವಿಕ್ಟಿಮ್ ಆಗಿ ಕಂಡರೆ ಮತ್ತೊಮ್ಮೆ ಕೊಲೆಗಡುಕಿಯಾಗಿ ಕಾಣತೊಡಗಿದಳು. ಅಪ್ಪನನ್ನ ಹಿಂಡಿ ಹಿಪ್ಪೆ ಮಾಡಿದವಳು ಜೀವನವನ್ನೇ ತೇಯ್ದ ತಪಸ್ವಿನಿಯಾಗಿ ಕಂಡಳು.

"ಯಾಕೆ, ಅಮ್ಮ ಜಗಳ ಮಾಡಿದ್ಲ? ಏನಾದ್ರು ಅಂದ್ಲ?"

"ನೀನು ಕಣ್ಣೆದುರಿಗ್ ಇರ್ಬೇಕಂತೆ. ನೀನು ಹೋದಾಗಿನಿಂದ ಅಟ್ಟ ಸೇರಿ ಕುಳಿತಿದ್ದಾಳೆ. ಕುಂತಲ್ಲೇ ಹೇಲು ಉಚ್ಚೆ ಮಾಡಿಕೊಂಡು ಮನೆ ಎಲ್ಲಾ ಗಬ್ಬೆದ್ದು ಹೋಗಂಗ್ ಮಾಡಿದಾಳೆ. ಅಕಿ ಮನ್ಷಿ ಅಲ್ಲಪ. ರಾಕ್ಷಸಿ. ಮಾತಾಡದ್ ದೆವ್ವ. ನಾನಾರೇ ಯಾಕ ಸಾಯ್ಲಿಲ್ಲೋ ನಮ್ಮಪ್ಪ ಅವ್ವನ್ ಜತಿಗ್." ಅಪ್ಪ ಮತ್ತೆ ಅಳಲು ಶುರು ಮಾಡಿದರು.

"ನಿಂಗ್ ನಿಜ್ವಾಗ್ಲೂ ಗೊತ್ತಿರ್ಲಿಲ್ವ ನಿಮ್ಮಪ್ಪ ಅವ್ವ ಏನ್ ಪ್ಲಾನ್ ಮಾಡಿದ್ರು ಅಂತ?"

"ಏನ್ ಬೊಗಳ್ತದಿಯೋ?" ಅಪ್ಪ ಸಿಟ್ಟಿನಿಂದ ಕೇಳಿದರು.

"ನಾನ್ ಹೊಟ್ಟೆಗ್ ಇದ್ದಾಗ್ ಅಮ್ಮಂಗ್ ಬೇಡಾಗಿದ್ದೆ. ಮತ್ತ್ ಈಗ್ ಯಾಕ್ ಬೇಕಂತೆ?"

"ಅಕಿನೇ ಕೇಳ್ ಬಾ." ನನ್ನ ರಟ್ಟೆ ಹಿಡಿದು ಎಳೆದುಕೊಂಡು ಹೋದರು ಮನೆಗೆ.

ನಾನು ಅಂದು ಮನೆಗೆ ಹೋದವನು ಮತ್ತೆಂದೂ ಮನೆ ಬಿಟ್ಟು ಹೋಗಲಿಲ್ಲ. ಅಂದು ಅಪ್ಪ ನನ್ನ ಬಿಟ್ಟು ಬಿಟ್ಟರು ಅನಿಸಿತು. ಅಮ್ಮನಿಗೆ ನನಗೆ ವಿಷಯ ಗೊತ್ತಾಗಿದೆ ಎನ್ನುವುದು ನನ್ನ ಕಣ್ಣುಗಳಿಂದಲೇ ತಿಳಿದರೂ ಅವಳ ಮುಖದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಆಕೆ ಅಪ್ಪನನ್ನು ದ್ವೇಷಿಸಿದರೂ, ಇದ್ಯಾವುದರಲ್ಲೂ ಪಾಲಿಲ್ಲದ ನನ್ನ ಪ್ರೀತಿಸುತ್ತಾಳೆ ಎಂದು ಸಮಾಧಾನವಾಯಿತು. ನಾನು ಮತ್ತೆ ಅಟ್ಟ ಹತ್ತಲಿಲ್ಲ. ಅಮ್ಮನ ತೊಡೆ ಮೇಲೆ ತಲೆ ಇಟ್ಟು ಮತ್ತೆ ಅದೇ ಕೋಣೆಯಲ್ಲಿ ಅದೇ ಮಂಚದ ಮೇಲೆ ಮಲಗತೊಡಗಿದೆ. ನನ್ನ ಜೀವನ ನಾನು ಆಯ್ದು ಕೊಂಡಿದ್ದಲ್ಲ; ನನ್ನ ಹಡೆದವರೂ ಆಯ್ದು ಕೊಂಡಿದ್ದಲ್ಲ. ನಾವು ಮೂವರೂ ನಾವು ಮಾಡಿರದ ಆಯ್ಕೆಗಳಿಗಾಗಿ ಜೀವ ತೇಯ ತೊಡಗಿದೆವು. ಎಷ್ಟೋ ಬಾರಿ ಅನಿಸಿತ್ತು ಮೂರು ಜನರಲ್ಲಿ ಒಬ್ಬರಾದರೂ ಖುಷಿಯಾಗಿದ್ದಿದ್ದರೆ ಅಮ್ಮನ ತಪಸ್ಸಿಗೆ ಅರ್ಥವಿರುತ್ತಿತ್ತು!

"ಡಾಕ್ಟರ್ ನಾವು ಮನೆಗೆ ಯಾವಾಗ್ ಹೋಗಬಹುದು?" ನಾನು ಅಳುಕುತ್ತಲೇ ಕೇಳಿದೆ.

"ಆಪರೇಷನ್ ಆಗಿ ಒಂದು ನೂರು ದಿನಾನಾದ್ರೂ ಇರಬೇಕಾಗುತ್ತೆ. ಹಾರ್ಟ್ ಟ್ರಾನ್ಸ್ಪ್ಲಾಂಟ್ ಅಂದ್ರೆ ಸುಲಭ ಅಲ್ಲ. ಯಾಕೆ ನಿಮಗೆ ಕೆಲ್ಸಕ್ಕೆ ಹೋಗಲು ತೊಂದ್ರೆ ಆಗ್ತಿದೆಯಾ?"

ಅಷ್ಟರಲ್ಲಿ ಅಮ್ಮ ಡಾಕ್ಟರ್ ಕೋಣೆಗೆ ನುಗ್ಗಿ ಬಂದಳು.

"ಡಾಕ್ಟರ್, ಮಗನೇ ಅವರಪ್ಪನಿಗೆ ಹಾರ್ಟ್ ಕೊಡಬೋದಲಾ?" ನಾನು ಮತ್ತು ಡಾಕ್ಟರ್ ತತ್ತರಿಸಿ ಅಮ್ಮನ ಕಡೆ ನೋಡಿದೆವು.

"ನಂಗೆ ಇವನಿಗಿಂತ ಇವನ ಅಪ್ಪ ಬದುಕಿರಾದು ಮುಖ್ಯ. ಅವರಿಗೆ ಪೆನ್ಷನ್ ಬರ್ತತೆ." ಎಂದು ಹೇಳಿ ಬಂದಷ್ಟೇ ವೇಗವಾಗಿ

ಹೊರ ನಡೆದು ಬಿಟ್ಟಳು.

ನಾನು ಸಾಯುವುದಕ್ಕಿಂತ ಅಪ್ಪ ಬದುಕಿ ನರಳುವುದು ಅವಳಿಗೆ ಮುಖ್ಯವಾಗಿತ್ತು. ಅವಳಿಗೆ ಪ್ರೀತಿಗಿಂತ ದ್ವೇಷ ದೊಡ್ಡದಾಗಿತ್ತು. ಡಾಕ್ಟರ್ ಏನು ನಡೀತು ಎಂದು ಅರಗಿಸಿಕೊಳ್ಳಲು ಆಗದೆ ನನ್ನತ್ತ ಪ್ರಶ್ನಾರ್ಥಕವಾಗಿ ನೋಡಿದರು.

"ಕೆಲಸಕ್ಕೆ ಸೇರಿದ ಕೂಡ್ಲೇ ಮದುವೆ ಮಾಡ್ತಾರೆ ಅಂತ ನಾನು ಕೆಲ್ಸಕ್ಕೆ ಸೇರಿಕೊಂಡಿಲ್ಲ." ನನ್ನ ಮಾತನ್ನು ಡಾಕ್ಟರ್ ನಂಬುವುದಿಲ್ಲ ಅಂತ ಗೊತ್ತಿದ್ದರೂ ನಿಜವನ್ನೇ ಹೇಳಿದೆ.

ಅಮ್ಮ ಹುಚ್ಚಿಯಲ್ಲ ಎಂದು ಗೊತ್ತಾದ ಮೇಲೆ ಡಾಕ್ಟರ್ ತಲೆ ಮೇಲೆ ಕೈ ಹೊತ್ತು ಕುಳಿತು ಬಿಟ್ಟರು!

****